


'ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್' ಫೈನಲ್‌ನಲ್ಲಿ ಭಾರತವನ್ನು ಮಣಿಸಿ ಗೆಲುವಿನ ಗದೆ ಹಿಡಿದಿರುವ ನ್ಯೂಜಿಲೆಂಡ್‌ನ ಕ್ಯಾಪ್ಟನ್ ವಿಲಿಯಮ್ಸನ್



ಮುಗ್ಗರಿಸಿ, ನತದೃಷ್ಟ ತಂಡ ಎಂದೆನಿಸಿಕೊಂಡಿದ್ದ ನ್ಯೂಜಿಲೆಂಡ್ ಆ ಹಣೆಪಟ್ಟಿ ಕಳಚಿಕೊಂಡ ದಿನ ಜೂನ್ 23. ಅದೀಗ ಟೆಸ್ಟ್ ಚಾಂಪಿಯನ್ ಆಗಿದ್ದರಲ್ಲಿ ಎದ್ದುಕಾಣುವುದು ಸಾವಧಾನದ ಧೋರಣೆ. ಅದಕ್ಕೆ ವಾಟ್ಲಿಂಗ್ ದೃಷ್ಟಾಂತದಂತೆ ಕಂಡರೆ, ನಾಯಕ ಕೇನ್ ವಿಲಿಯಮ್ಸನ್ ಅದರ ಮೂರ್ತರೂಪ.

ಹನ್ನೆರಡೂವರೆ ವರ್ಷಗಳ ತಮ್ಮ ಟೆಸ್ಟ್ ಕ್ರಿಕೆಟ್ ಬದುಕನ್ನು ವಾಟ್ಲಿಂಗ್ ಪೂರೈಸಿದರು. 75 ಟೆಸ್ಟ್ ಪಂದ್ಯಗಳಲ್ಲಿ ವಿಕೆಟ್ ಕೀಪಿಂಗ್ ಮಾಡಿಕೊಂಡು, ಎಂಟು ಶತಕ ಗಳಿಸಿ, ಏರುಪೇರುಗಳಿಗೆ ಸಾಕ್ಷಿಯಾಗುತ್ತಾ ಬಂದೇ ಬರತಾವ ಕಾಲ ಎಂದು ಕಾಯ್ದವರು ಅವರು. ಅವರಿಗೆ ವಿದಾಯ ಹೇಳಿದ ಪಂದ್ಯದಲ್ಲಿ ಇಡೀ ನ್ಯೂಜಿಲೆಂಡ್ ತಂಡ 'ಹೊಸ ಚಿಗುರು ಹಳೆ ಬೇರು ಕೂಡಿದರೆ ಮರ ಸೊಬಗು' ಎಂಬಂತಿತ್ತು.

ಆಸ್ಟ್ರೇಲಿಯಾ ನೆಲದಲ್ಲಿ ಆ ತಂಡವನ್ನು ಗೋಳುಹೊಯ್ದುಕೊಂಡು, ತವರಿನಲ್ಲಿ ಇಂಗ್ಲೆಂಡ್ ತಂಡದವರನ್ನು ಚಿಂದಿ ಮಾಡಿ ಟೆಸ್ಟ್ ಕ್ರಿಕೆಟ್‌ನ ಮೊದಲ ಶ್ರೇಷ್ಠ ತಂಡವಾಗಿ ಭಾರತ ಬೀಗಿದ್ದನ್ನು ಕಂಡೆವು. ಆ ಎರಡೂ ಸರಣಿಗಳಲ್ಲಿ ತಂಡಕ್ಕೆ 'ವಿರಾಟ' (ಕೊಹ್ಲಿ) ಬಲ ಇರಲಿಲ್ಲ. ಆಸ್ಟ್ರೇಲಿಯಾ ಸರಣಿಯ ನಡುವೆಯೇ ಅವರು ಪುತ್ರೋತ್ಸವಕ್ಕಾಗಿ ರಜಾ ಪಡೆದು ಬಂದರು. ಆಗ ಭಾರತದಲ್ಲೂ ಹೊಸ ಚಿಗುರೇ ಮೇಳೈಸಿತ್ತು. ಹನುಮ ವಿಹಾರಿ ಸಂಯಮದಲ್ಲಿ ಚೇತೇಶ್ವರ ಪೂಜಾರಿಯ ತಮ್ಮ ಎನ್ನುವಂತೆ ಆಡಿದ್ದರು. ಸಿಕ್ಕ ಅವಕಾಶವನ್ನೇ ವಾಷಿಂಗ್ಟನ್ ಸುಂದರ್, ಶಾರ್ದೂಲ್ ಠಾಕೂರ್, ಮಹಮ್ಮದ್ ಸಿರಾಜ್ ತರಹದವರು ಹಣ್ಣಾಗಿಸಿಕೊಂಡಿದ್ದರು. ಅವರ ಛಲದೊಟ್ಟಿಗೆ ರಹಾನೆ ಹಾಗೂ ಅಶ್ವಿನ್ ಅನುಭವ ಮೇಳೈಸಿತ್ತು. ಇವರೆಲ್ಲರ ಕಿಡಿಯನ್ನು ಬೆಂಕಿಯಾಗಿಸುವಂತೆ ರಿಷಭ್ ಪಂತ್ ದಾಳಿಯಿಟ್ಟಿದ್ದರು. ಅನುಭವಿಗಳು ಗಾಯಾಳುಗಳಾದದ್ದೇ ವರದಾನವಾಯಿತು ಎನ್ನುವಂಥ ಸರಣಿಗಳವು.

ಫೈನಲ್‌ನಲ್ಲಿ ಕೊಹ್ಲಿ ಅನುಭವಿ ಪಡೆಯನ್ನೇ ನೆಚ್ಚಿಕೊಂಡರು. ಶುಭಮನ್ ಗಿಲ್ ಅವರನ್ನು ಹೊಸ ಚಿಗುರೂ ಇರಲಿ ಎನ್ನುವಂತೆ ಉಳಿಸಿಕೊಂಡರಷ್ಟೆ. ಗಿಲ್ ಗಿಲ್ಲಿ ಸದ್ದು ಮಾಡಲಿಲ್ಲ. ಕರ್ನಾಟಕದ ತಂತ್ರ ನಿಪುಣ ಕೆ.ಎಲ್. ರಾಹುಲ್ ಆಡಿದ್ದರೆ ಚೆನ್ನಾಗಿತ್ತಲ್ಲವೇ ಅನ್ನಿಸಲು ಇದೇ ಕಾರಣ. ಅನುಭವಿ ಪೂಜಾರ ಕೂಡ ಉಭಯ ದಿಕ್ಕುಗಳಿಗೆ ಸ್ವಿಂಗ್ ಮಾಡಿ ನ್ಯೂಜಿಲೆಂಡ್ ಬೌಲರ್‌ಗಳು ತೋಡಿದ ಖೆಡ್ಡಾದೊಳಗೆ ಬಿದ್ದರು. ಪಂತ್ ದಾಳಿಕೋರತನ ಎರಡನೇ ಇನಿಂಗ್ಸ್‌ನಲ್ಲಿ ರಂಜನೆ ನೀಡಿತಾದರೂ ಪಂದ್ಯವನ್ನು ಉಳಿಸಿಕೊಡುವ ಸಾವಧಾನದ ಕೊರತೆ ಅದರಲ್ಲಿ ಇತ್ತು. ಸೂಕ್ಷ್ಮ ಘಟ್ಟದಲ್ಲಿ ಮನರಂಜನೆಯನ್ನೂ ಮೀರಿದ ತಾಳ್ಮೆಯ ಅಗತ್ಯ ಇರುತ್ತದೆ. ಅದನ್ನು ತೋರಿಸಿದ್ದು ನ್ಯೂಜಿಲೆಂಡ್‌ನ ನಾಯಕ ಕೇನ್ ವಿಲಿಯಮ್ಸನ್ ಹಾಗೂ ನಿವೃತ್ತಿಯನ್ನು ಮುಂದೂಡುತ್ತಲೇ ಒಳ್ಳೆಯ ದಿನಗಳಿಗಾಗಿ ಎದುರು ನೋಡುತ್ತಾ ಬಂದಿರುವ ರಾಸ್ ಟೇಲರ್.

ಇಡೀ ಪಂದ್ಯದಲ್ಲಿ ಭಾರತದ ನಾಯಕ ವಿರಾಟ್ ಕೊಹ್ಲಿ 239 ನಿಮಿಷ ಬ್ಯಾಟಿಂಗ್ ಮಾಡಿದರು. ನ್ಯೂಜಿಲೆಂಡ್‌ನ ಲೀಡರ್ ವಿಲಿಯಮ್ಸನ್ 441 ನಿಮಿಷ ತಾಳ್ಮೆಯ ಮೂರ್ತಿಯೇ ಆಗಿಬಿಟ್ಟರು. ಇಬ್ಬರ ನಡುವಿನ ಆಟದ 102 ನಿಮಿಷಗಳ ವ್ಯತ್ಯಾಸ ಸಾವಧಾನದ ಗೆಲುವಿಗೆ ಕನ್ನಡಿ ಹಿಡಿಯುತ್ತದೆ. ಎರಡನೇ ಇನಿಂಗ್ಸ್‌ನಲ್ಲಿ ತಡಬಡಾಯಿಸುತ್ತಲೇ ಪಂತ್ ಹಾಗೂ ಜಡೇಜ 33 ರನ್‌ಗಳ ಜತೆಯಾಟ ಆಡಿದ್ದಕ್ಕೂ, ಎರಡು ಗಂಟೆ ಅವುಡುಗಚ್ಚಿ ಗೆಲುವನ್ನು ಮುಚ್ಚಟೆ ಮಾಡುವಂತೆ ವಿಲಿಯಮ್ಸನ್–ಟೇಲರ್ ಸಂಯಮ ತುಳುಕಿಸುತ್ತಾ 96 ರನ್‌ಗಳನ್ನು ಔಟ್ ಆಗದೇ ಸೇರಿಸಿದ್ದಕ್ಕೂ ಅಜಗಜಾಂತರ.

ಒಂದು ರನ್ ಅಷ್ಟೇ ಗಳಿಸಿದ್ದಾಗ ವಿಲಿಯಮ್ಸನ್ ಎಲ್‌ಬಿ ಎಂದು ಅಂಪೈರ್ ತೀರ್ಪಿತ್ತಿದ್ದರು. ಮೂರನೇ ಅಂಪೈರ್ ಮನವಿ ಮಾಡಿದ ನಾಯಕನಿಗೆ ತಾನಿಟ್ಟ ಹೆಜ್ಜೆ ಬಗ್ಗೆ ವಿಶ್ವಾಸವಿತ್ತು. ಆಗ ಔಟಾಗದೆ ಉಳಿದುಕೊಂಡ ಅವರು ಇನ್ನೊಂದು ಕೆಟ್ಟ ಹೊಡೆತಕ್ಕೆ ಕೈಹಾಕಿದ್ದು ಅರ್ಧಶತಕಕ್ಕೆ ಒಂದು ರನ್ ಹಿಂದೆ ಇದ್ದಾಗಲಷ್ಟೆ. ಟೇಲರ್ ಕೂಡ ಪೂಜಾರ ಸ್ಲಿಪ್‌ನಲ್ಲಿ ಕೊಟ್ಟ ಜೀವದಾನದ ದೊಡ್ಡ ಲಾಭ ಪಡೆದರು. ಮೊದಲ ರನ್ ಹೊಡೆಯಲು 18 ಎಸೆತಗಳನ್ನು ಎದುರಿಸಿದ ಅವರು ಆಮೇಲೆ ಅವಕಾಶ ಸಿಕ್ಕಾಗಲೆಲ್ಲ ಗಳಿಸಿದ ಬೌಂಡರಿಗಳು ನಾಯಕನ ಭಾರವನ್ನು ಹಗುರವಾಗಿಸುವ ಮಾರ್ಗವಾಯಿತು.

ವಿಲಿಯಮ್ಸನ್ ನಾಯಕತ್ವದ ರುಜು ಇಡೀ ಪಂದ್ಯದಲ್ಲಿತ್ತು. ಮೊದಲ ಇನಿಂಗ್ಸ್‌ನಲ್ಲಿ ಅರ್ಧ ಪುಲ್ ಮಾಡುತ್ತಿದ್ದ ರಹಾನೆ ಇರಾದೆಯನ್ನು ಅರಿತು ಫೀಲ್ಡರ್ ಬದಲಿಸಿ, ಚಾಣಾಕ್ಷ ರೀತಿಯಲ್ಲಿ ಅವರನ್ನು ಔಟ್ ಮಾಡಿದ್ದು ಅದಕ್ಕೆ ಒಂದು ಉದಾಹರಣೆ. ವಿಕೆಟ್‌ಗಳು ಮೊದಲ ಇನಿಂಗ್ಸ್‌ನಲ್ಲಿ ಬೀಳುತ್ತಿರುವುದನ್ನು ಅರಿತು, ಯುವಕ ಕೈಲ್ ಜೆಮಿಸನ್‌ಗೆ 'ಎಲ್ಲ ಎಸೆತಗಳನ್ನೂ ಹೊಡಿ' ಎಂದು ಬ್ಯಾಟಿಂಗ್ ಮಾಡುವಾಗ ಆದೇಶವಿತ್ತಿದ್ದು ಇನ್ನೊಂದು ಉದಾಹರಣೆ. ಪಂತ್ ಹೊರನುಗ್ಗಿ ಆಡುತ್ತಿರುವುದನ್ನು ಕಂಡು ಕ್ರುದ್ಧರಾದ ವ್ಯಾಗ್ನರ್‌ಗೇ ಮತ್ತೆ ಮತ್ತೆ ಚೆಂಡು ಕೊಟ್ಟು ಹಳ್ಳ ತೋಡಿಸಿದ್ದು ಮತ್ತೊಂದು ಉದಾಹರಣೆ. ಸೌಥಿ, ಬೌಲ್ಟ್ ಸ್ವಿಂಗ್‌ನ ಅಡಿಪಾಯ, ಜೆಮಿಸನ್ ಅದರ ಮೇಲೆ ಯಾಕೆ ಅಪಾಯ–ಎರಡನ್ನೂ ಕಂಡ ಕ್ರಿಕೆಟ್ ಪ್ರೀತಿಯ ಕಣ್ಣುಗಳಿಗೆ ಚೆಂದದ ಆಟದ ರಸದೌತಣ.

ಪ್ರತಿಕ್ರಿಯಿಸಿ: feedback@sudha.co.in